

# ಡಾಕ್ಟರ್ ಸಾಹೇಬ್

## ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ಸಮಾಜವಾದಿ ಹಕ್ಕಿಗಳು ಮತ್ತು ಪರಂಗಿ ಸರ್ಕಾರದ ಪೊಲೀಸರು

ಲೋಹಿಯಾ ರೂಪಿಸಿದ ಭೂಗತ ಕಾಂಗ್ರೆಸ್ ರೇಡಿಯೋ ಸೇರಿಕೊಂಡ ಉಷಾ ಮೆಹ್ತಾ ತನ್ನ ಎಂಟನೆಯ ವಯಸ್ಸಿನಲ್ಲೇ ಗುಜರಾತಿನ ಸೂರತ್ ಜಿಲ್ಲೆಯಲ್ಲಿ 'ಸೈಮನ್, ಗೋ ಬ್ಯಾಕ್!' ಚಳುವಳಿಯಲ್ಲಿ ಭಾಗವಹಿಸಿದ್ದ ಹುಡುಗಿ. ಆಗಲೇ ಗಾಂಧೀಜಿಯಿಂದ ಪ್ರಭಾವಿತರಾದ ಉಷಾ ಖಾದಿ ತೊಡಲಾರಂಭಿಸಿದರು. ಉಷಾ ತಂದೆ ಬ್ರಿಟಿಷ್ ಸರ್ಕಾರದಲ್ಲಿ ನ್ಯಾಯಾಧೀಶರಾಗಿದ್ದರು. ತಂದೆಗೆ ಮುಂಬೈಗೆ ವರ್ಗವಾದಾಗ 22 ವರ್ಷದ ಉಷಾ ಲಾ ಓದಲು ಆ ಮಹಾನಗರಕ್ಕೆ ಬಂದರು. ಮಗಳ ರಾಜಕೀಯ ಚಟುವಟಿಕೆ ತಂದೆಗೆ ಇರುಸುಮುರುಸುಂಟು ಮಾಡುತ್ತಿದ್ದುದು ಸಹಜವಾಗಿತ್ತು!

ಕಾಂಗ್ರೆಸ್ ರೇಡಿಯೋದ ಪ್ರಸಾರಕಿಯಾದ ಉಷಾ ಮೆಹ್ತಾ ಈ ಮೊದಲು ಲೋಹಿಯಾಗೆ ಪರಿಚಯವಿರಲಿಲ್ಲ. ಉಷಾ ಮೆಹ್ತಾರ ಧ್ವನಿ ಪ್ರಸಾರವಾದ ಮೇಲೆ ಲೋಹಿಯಾ ಆಕೆಯ ಸಂಬಂಧಿಯೊಬ್ಬರ ಮೂಲಕ ಕಳಿಸಿಕೊಟ್ಟ ಚೀಟಿ ಆಕೆಗೆ ತಲುಪಿತು:

'ನಿಮ್ಮ ವೈಯಕ್ತಿಕ ಪರಿಚಯ ನನಗೆ ಇಲ್ಲ. ಆದರೆ ನಿಮ್ಮ ಧೈರ್ಯ, ಉತ್ಸಾಹ, ಹಾಗೂ ಗಾಂಧೀಜಿ ಆರಂಭಿಸಿರುವ ಯಜ್ಞಕುಂಡದ ಅಗ್ನಿಗೆ ನಿಮ್ಮ ಶಕ್ತಿಯನ್ನು ಧಾರೆಯೆರೆಯಲು ಹೊರಟಿರುವ ನಿಮ್ಮ ಹಂಬಲವನ್ನು ಮನಸಾರೆ ಪ್ರಶಂಸಿಸುವೆ.'

ಉಷಾ ಮೆಹ್ತಾ ಪ್ರಸಾರದ ಮನೆಗಳನ್ನು ಬದಲಾಯಿಸುತ್ತಾ ಪ್ರತಿ ರಾತ್ರಿ ಎಡೆಬಿಡದೆ ರೇಡಿಯೋ ಪ್ರಸಾರ ನಡೆಸತೊಡಗಿದರು. ಲೋಹಿಯಾ ಇರುವೆಡೆಗೆ ತನ್ನ ಸಲಕರಣೆಗಳೊಂದಿಗೆ ಹೋಗಿ ಅವರ ಮಾತುಗಳನ್ನು ರೆಕಾರ್ಡ್ ಮಾಡುತ್ತಾ, ಅಥವಾ ಬೇರೆಡೆಯಿಂದ ಅವರ ರೆಕಾರ್ಡಿಂಗ್‌ಗಳನ್ನು ತರಿಸಿಕೊಳ್ಳುತ್ತಾ ಉಷಾ 'ಕಾಂಗ್ರೆಸ್ ರೇಡಿಯೋ'ದ ನಿತ್ಯದ ಪ್ರಸಾರಕ್ಕೆ ಸಜ್ಜಾಗುತ್ತಿದ್ದರು.

ಬೆನ್ನು ಹತ್ತಿದ್ದ ಪೊಲೀಸರಿಂದ ತಪ್ಪಿಸಿಕೊಂಡು ಮುಂಬೈನ ಯಾವಯಾವುದೋ